	Chitradurga	6
	Davangere	112
	Shimoga	130
	Hassan	221
	Chikkamagalur	168
	Udupi	28
	Dakshina Kannada	45
	Kodagu	78
	Chamarajanagar	97
	Ramnagar	147
	Chikkaballapur	167
	Bangalore Rural	40
	Bangalore Urban	0
	Kolar	52
	Total	**1917**
GRAND TOTAL (Kms)		**3411**

193 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ ಬನಹಟ್ಟಿ ನಗರಕ್ಕೆ ಕುಡಿಯುವ ನೀರಿನ ಯೋಜನೆ 45 ವರ್ಷಗಳ ಹಿಂದಿನದಿದ್ದು, ಸರಿಯಾಗಿ ನೀರು ಪೂರೈಕೆ ಆಗದೇ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

– ಹೌದು –

ಆ ಹಾಗಿದ್ದಲ್ಲಿ, ಹೊಸಯೋಜನೆಯನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಬನಹಟ್ಟಿ ನಗರಕ್ಕೆ ನೀರು ಸರಬರಾಜು ಸುಧಾರಣೆಗಾಗಿ ರೂ.12.00 ಕೋಟಿಗಳಿಗೆ ಪೂರ್ವಭಾವಿ ಯೋಜನಾ ವರದಿ (PFR) ತಯಾರಿಸಲಾಗಿದ್ದು, ಸರ್ವೆಕಾರ್ಯ ಪ್ರಗತಿಯಲ್ಲಿದೆ.

ಇ ಅಲ್ಲಿಯವರೆಗೆ ಯಾವ ರೀತಿ ನಗರಕ್ಕೆ ನೀರು ಪೂರೈಸಲಾಗುವುದು?

ಬನಹಟ್ಟಿ ನೀರು ಸರಬರಾಜು ನಿರ್ವಹಣೆಯನ್ನು ನಗರಸಭೆಯಿಂದ ನಿರ್ವಹಿಸುತ್ತಿದ್ದು, ಕೃಷ್ಣನದಿ ಮೂಲದಿಂದ 45 ವರ್ಷಗಳಷ್ಟು ಹಳೆಯದಾದ ಫಿಲ್ಟರ್ ಹೌಸ್ ಹಾಗೂ ಜಾಕ್‌ವೆಲ್‌ನಿಂದ ನೀರು ಪೂರೈಕೆ ಮಾಡಲಾಗುತ್ತಿದೆ.

194 ಶ್ರೀ ಸಿದ್ದು ಸವದಿ

ಮಾನ್ಯ ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು

ಅ) ಉತ್ತರ ಕರ್ನಾಟಕದ ಸಣ್ಣ ಪಟ್ಟಣಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಯೋಜನೆಯನ್ನು (ಕೆಯುಐಡಿಎಫ್ ಸಿ) ಎ.ಡಿ.ಬಿ.ಯಿಂದ ಸಾಲ ಪಡೆದು ಅಭಿವೃದ್ಧಿಪಡಿಸುವ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಎ.ಡಿ.ಬಿ.ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದ ಮೊದಲನೇ ಟ್ರ್ಯಾಂಚ್‌ನ ಸಾಲ ಹಾಗೂ ಯೋಜನಾ ಒಪ್ಪಂದಗಳಿಗೆ ಜನವರಿ, 2008ರಲ್ಲಿ ಸಹಿಮಾಡಲಾಗಿದ್ದು, ಸಾಲವು ಏಪ್ರಿಲ್–2008ರಿಂದ ಚಾಲ್ತಿಗೆ ಬಂದಿರುತ್ತದೆ. ಮೊದಲನೇ ಟ್ರ್ಯಾಂಚ್‌ನಲ್ಲಿ ಮೂರು ಪಟ್ಟಣಗಳಾದ ಹೊಸಪೇಟೆ, ಹಾವೇರಿ ಹಾಗೂ ರಾಯಚೂರು ನಗರಗಳನ್ನು ಆಯ್ಕೆಮಾಡಲಾಗಿದೆ.

ಸಮಾಲೋಚಕರು ಸರ್ವೆ ಕಾರ್ಯ ಕೈಗೊಂಡು ವಿಸ್ತೃತ ಯೋಜನಾ ವರದಿಯನ್ನು ತಯಾರಿಸುತ್ತಾರೆ. ಮೊದಲನೇ ಟ್ರ್ಯಾಂಚ್‌ನ ಕಾಮಗಾರಿಗಳಿಗೆ ಟೆಂಡರ್ ಗಳನ್ನು ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) ಹಾಲಿ ಮಂಜೂರಿಯಾದ ಹಣದಲ್ಲಿ ಅಯಾ ನಗರಗಳ ಸಂಪೂರ್ಣ ಅಭಿವೃದ್ಧಿ ಆಗುವುದೇ?

ಲಭ್ಯವಿರುವ ಎಡಿಬಿ ಸಾಲದ ಮೊತ್ತದ ಮಿತಿಗೊಳಪಟ್ಟಂತೆ ಆದ್ಯತೆಯ ಮೇರೆಗೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಇಲ್ಲವಾದಲ್ಲಿ ಯಾವ ರೀತಿ ಇನ್ನುಳಿದ ಕೆಲಸಗಳನ್ನು ಪೂರೈಸಲಾಗುವುದು; ಈಗಾಗಲೇ 'ಆ' ನಲ್ಲಿ ಉತ್ತರಿಸಿರುವ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 50 ಸಾವಿರ ಜನಸಂಖ್ಯೆ ಮೇಲ್ಪಟ್ಟು ಇರುವ ನಗರಗಳನ್ನು ಮಾತ್ರ ಎಡಿಬಿ ಯಲ್ಲಿ ಆಯ್ಕೆ ಮಾಡಿದ್ದು, ಇನ್ನುಳಿದ ಪಟ್ಟಣಗಳ ಅಭಿವೃದ್ಧಿಗೆ ಯಾವ ಕ್ರಮ ಕೈಗೊಳ್ಳಲಾಗುವುದು;